ಪ್ರಮಾಣಪತ್ರಕ್ಕೆ ಲಗತ್ತು

ಓ ಎಸ್ ನಂ.285/2017
ಪಿ ಡಬ್ಲ್ಯು.1

ದಿನಾಂಕ: **03.07.2024** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ನೀಡಲಾಯಿತು.

ಮುಂದುವರಿದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಆರ್ ಎಂ ಜಿ ವಕೀಲರಿಂದಃ-

ಹೆಚ್ ಎಲ್ ನಂ.**43** ಕ್ಕೆ ಸಂಬಂದಪಟ್ಟಂತೆ ನನಗೆ ಯಾವುದೇ ಹಕ್ಕು ಪತ್ರವನ್ನು ನಿಡೀರುವುದಿಲ್ಲ. ನಿ.ಪಿ.**9** ರಲ್ಲಿರುವ ಚಕ್ಕುಬಂದಿಯನ್ನು ನಾಗಮಂಗಲ ಮಂಡಲ್ ಪಂಚಾಯ್ತಿಯವರು ನೀಡಿದ ಹೌಸ್ ಲಿಸ್ಟ್‌ನ ಆಧಾರದ ಮೇಲೆ ಬರೆಯಲಾಗಿರುತ್ತದೆ. **1991** ರಲ್ಲಿ ನಾಗಮಂಗಲ ಮಂಡಲ್ ಪಂಚಾಯ್ತಿಯವರು ನನಗೆ ಹೌಸ್ ಲಿಸ್ಟ್ ನ್ನು ನೀಡಿರುತ್ತಾರೆ. ನಾನು ಯಾವುದೇ ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನಿ.ಪಿ.**9** ನ್ನು **2016-17** ರಲ್ಲಿ ನೀಡಲಾಗಿರುತ್ತದೆಂದರೆ ಸಾಕ್ಷಿ ಗಲಾಟೆ ಆದಾಗ ನಾನು ಅದನ್ನು ತೆಗೆದುಕೊಂಡಿರುತ್ತೇನೆಂದು ಹೇಳಿರುತ್ತಾರೆ. ನಿ.ಪಿ.**9** ರಿಂದ **11** ರ ಚಕ್ಕುಬಂದಿಗೆ ಸಂಬಂದಪಟ್ಟ ಯಾವುದೇ ದಾಖಲೆಗಳು ಇರುವುದಿಲ್ಲ. ನಿ.ಪಿ.**12** ರಲ್ಲಿ ಇರುವ ಚಕ್ಕುಬಂದಿಯ ದಕ್ಷಿಣಕ್ಕೆ ರಸ್ತೆ ಎಂದು ಇರುತ್ತದೆಂದರೆ ಸರಿ.

**2.** ಹೆಚ್ ಎಲ್ ನಂ.**43** ಕ್ಕೆ ಸಂಬಂದಪಟ್ಟಂತೆ ಯಾವುದೇ ಮ್ಯುಟೇಶನ್ ಆಗಿರುವುದಿಲ್ಲ. ಕೇವಲ ಹೌಸ್ ಲಿಸ್ಟ್ ಮಾತ್ರ ಇರುತ್ತದೆ ನಿ.ಪಿ.**13** ರಲ್ಲಿರುವ ಬರವಣಿಗೆಗಳಲ್ಲಿ ವತ್ಯಾಸವಿರುತ್ತದೆಂದರೆ ಸರಿಯಲ್ಲ. ನಿ.ಪಿ.**15** ರಲ್ಲಿ ದಕ್ಷಿಣಕ್ಕೆ **08** ಅಡಿ ರಸ್ತೆ ಮತ್ತು ನಂಜೇಗೌಡ ಎಂದು ಇದೆ ಎಂದರೆ ಸಾಕ್ಷಿ ಗ್ರಾಮ ಪಂಚಾಯ್ತಿಯಲ್ಲಿ ತಿದ್ದುಪಡಿ ಮಾಡಿರಬಹುದು ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಪಂಚಾಯ್ತಿ ಅಧಿಕಾರಿಗಳು ಶಾಮೀಲಾಗಿ ದಾಖಲೆಗಳನ್ನು ತಿದ್ದುಪಡಿ ಮಾಡಿದ್ದಾರೆಂದು ಹೇಳುತ್ತಾರೆ. ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲೆಗಳು ಸೃಷ್ಟಿ ಮಾಡಿರುವ ದಾಖಲೆಗಳಾಗಿರುತ್ತವೆಂದರೆ ಸರಿಯಲ್ಲ. ನಿ.ಪಿ.**21** ರಲ್ಲಿ ತೋರಿಸಿರುವ ಚೆಕ್ಕುಂದಿಯ ದಕ್ಷಿಣ ದಿಕ್ಕಿಗೆ ಇರುವ ನಂಜೇಗೌಡರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಸಾಕ್ಷಿ ಮುಂದುವರೆದು ಅವರು **10** ಅಡಿ ಜಾಗವನ್ನು ತೆರವುಗೊಳಿಸಿಕೊಡುತ್ತೇವೆಂದು ಹೇಳಿದ್ದರಿಂದ ಅವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದು ಹೇಳುತ್ತಾರೆ.

**3.** ನಿ.ಪಿ.**21** ಮಹಜರ್ ಸಮಯದಲ್ಲಿ ನೋಟೀಸನ್ನು ಪಂಚಾಯ್ತಿ ಕಡೆಯಿಂದ ಪ್ರತಿವಾದಿಯರಿಗೆ ನೀಡಿರುವುದಿಲ್ಲ. ನಿ.ಪಿ.**21** ರಲ್ಲಿ ಪ್ರತಿವಾದಿಯರ ಸಹಿ ಇರುವುದಿಲ್ಲ ನಂಜೇಗೌಡರ ಸಹಿ ಇರುತ್ತದೆ. ನಿ.ಪಿ.**24** ರಲ್ಲಿ ಇರುವ ಚೆಕ್ಕುಬಂದಿಯ ದಕ್ಷಿಣಕ್ಕೆ **10** ಜಾಗ

ಎಂದು ನಮೂದಾಗಿರುತ್ತದೆಂದರೆ ಸಾಕ್ಷಿ **15** ಅಡಿ ಜಾಗ ಇರುತ್ತದೆಂದು ಹೇಳುತ್ತಾರೆ. ನಿ.ಪಿ.**25** ರಲ್ಲಿ ದಕ್ಷಿಣಕ್ಕೆ **15** ಅಡಿ ಎಂದು ನಮೂದಾಗಿರುತ್ತದೆಂದರೆ ಸರಿ.

**4.** ನಾನು ಇಓ ಕಛೇರಿಯಲ್ಲಿ ಯು ಪಿ ಸಿ ನಂ.**07/2016** ಅರ್ಜಿಯನ್ನು ಸಲ್ಲಿಸಿದ್ದು ಸದರಿ ಅರ್ಜಿಯಲ್ಲಿ ಇಓ ರವರು ಸ್ಥಳಕ್ಕೆ ಹೋಗಿ ಮಹಜರ್ ಮಾಡಬೇಕೆಂದು ಪಿ ಡಿ ಓ ರವರಿಗೆ ನಿರ್ದೇಶನ ನೀಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಮಹಜರಿನ ಸಮಯದಲ್ಲಿ ನಾನು ಹಾಜರಿದ್ದೆ ಎಂದರೆ ಸರಿಯಲ್ಲ. ಸಾಕ್ಷಿ ನನಗೆ ಯಾವುದೇ ನೋಟೀಸು ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಈಗ ಒಂದು ಛಾಯಾ ಚಿತ್ರವನ್ನು ತೋರಿಸಲಾಗಿ ಸಾಕ್ಷಿ ಸದರಿ ಛಾಯಾ ಚಿತ್ರವನ್ನು ನೋಡಿ ಒಪ್ಪಿಕೊಂಡಿದ್ದು ಅದನ್ನು ನಿ.ಡಿ.**1** ಎಂದು ಗುರುತಿಸಲಾಯಿತು. ಪಿಡಿಓ ರವರು ಸ್ಥಳಕ್ಕೆ ಬಂದು ಅಳತೆ ಮಾಡಿ ವರದಿಯನ್ನು ಸಲ್ಲಿಸಿದ ನಂತರ ನಾನು ಸಲ್ಲಿಸಿದ ಯು ಪಿ ಸಿ ನಂ.**07/2016** ವಜಾ ಗೊಂಡಿರುತ್ತದೆಂದರೆ ಸರಿ. ಪಂಚಾಯ್ತಿಯವರು **8** ಅಡಿ ರಸ್ತೆಗೆ ಸಂಬಂದಪಟ್ಟಂತೆ ಸಭೆಯನ್ನು ನಡೆಸಿ ನಿರ್ಣಯ ಕೈಗೊಳ್ಳಲಾಗಿರುತ್ತದೆಂದರೆ ಸರಿಯಲ್ಲ.

**5.** ಹೆಚ್ ಎಲ್ ನಂ.**43** ಕ್ಕೆ ಸಂಬಂದಪಟ್ಟಂತೆ ಪಂಚಾಯ್ತಿಯವರು ಯಾವುದೇ ಮ್ಯುಟೇಶನ್ ಮತ್ತು ಹೌಸ್ ಲಿಸ್ಟ್ ದಾಖಲೆಯನ್ನು ನೀಡಿರುವುದಿಲ್ಲ ಎಂದು ಹೇಳಿರುತ್ತಾರೆಂದರೆ ಸರಿಯಲ್ಲ. ದಿಃ**31.08.1978** ರಲ್ಲಿ ಸ್ವತ್ತನ್ನು ಖರೀದಿ ಮಾಡಿದ ನಂತರ ಪ್ರತಿವಾದಿ ಸದರಿ ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದು ಅದರಿಲ್ಲಿ ದಕ್ಷಿಣಕ್ಕೆ **8** ಅಡಿ ರಸ್ತೆ ಎಂದು ನಮೂದಾಗಿರುತ್ತದೆ ಯಾವುದೇ **12** ಅಡಿ ರಸ್ತೆ ಇರುವುದಿಲ್ಲವೆಂದರೆ ಸಾಕ್ಷಿ ಅದು ಸುಳ್ಳಿನಿಂದ ಕೂಡಿರುತ್ತದೆಂದು ಹೇಳುತ್ತಾರೆ. ಪ್ರತಿವಾದಿ ಮನೆಯನ್ನು ಕಟ್ಟುತ್ತಿರುವುದರಿಂದ ಅವರಿಗೆ ತೊಂದರೆ ನೀಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನ್ಯಾಯಾಲಯದಿಂದ ನಿಯೋಗಿಯನ್ನು ನೇಮಕ ಮಾಡಿ ದಾವಾ ಸ್ವತ್ತನ್ನು ಅಳತೆ ಮಾಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

<u>ಮರು ವಿಚಾರಣೆ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಲಾಯಿತು.)

ಓ ಹೇ ಕೇ ಸ ಇದೆ.

ಸಹಿ/-

ಪ್ರಧಾನ ಸಿ. ನ್ಯಾ. ಮತ್ತು
ಜೆಎಂಎಫ್, ಶಿಡ್ಲಘಟ್ಟ